# ಕಡಿತಗೊಳಿಸಿದ ಪಠ್ಯಕ್ರಮ 2020–21 ರ ಮಾದರಿ ಪ್ರಶ್ನೆ ಪತ್ರಿಕೆ – 1

## ದ್ವಿತೀಯ ಪಿ.ಯು.ಸಿ

## ವ್ಯವಹಾರ ಅಧ್ಯಯನ – 27

**ಸಮಯ: 3.15 ಗಂಟೆ** **ಗರಿಷ್ಠ ಅಂಕಗಳು: 100**

ಅಭ್ಯರ್ಥಿಗಳಿಗೆ ಸೂಚನೆಗಳು:

1. ಪ್ರಶ್ನೆಗಳಿಗೆ ಉತ್ತರಿಸುವಾಗ ಪ್ರಶ್ನೆಪತ್ರಿಕೆಯಲ್ಲಿರುವ ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ಬರೆಯಿರಿ.
2. ಸರಿಯಾದ ಮತ್ತು ಪೂರ್ಣ ಉತ್ತರಗಳನ್ನು ಬರೆಯಿರಿ.

### ವಿಭಾಗ – ಎ

**I.** ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. ಬಹು ಆಯ್ಕೆ ಪ್ರಶ್ನೆಗಳನ್ನು ಉತ್ತರಿಸುವಾಗ, ಸರಿ ಉತ್ತರದ ಕ್ರಮ ಸಂಖ್ಯೆಯೊಂದಿಗೆ ಸರಿಯಾದ ಉತ್ತರವನ್ನು ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ: **10X1=10**

1. ದಕ್ಷತೆ ಎಂದರೇನು?
2. ವೈಜ್ಞಾನಿಕ ನಿರ್ವಹಣೆಯ ಪಿತಾಮಹ ಎಂದು ಯಾರನ್ನು ಕರೆಯಲಾಗುತ್ತದೆ?
3. ನಿರ್ವಹಣೆಯ ತತ್ವಗಳನ್ನು ಹೇಗೆ ರಚಿಸಲಾಗಿದೆ?
   ಎ. ಪ್ರಯೋಗ ಶಾಲೆಯಲ್ಲಿ ಬಿ. ವ್ಯವಸ್ಥಾಪಕರ ಅನುಭವಗಳಿಂದ
   ಸಿ. ಗ್ರಾಹಕರ ಅನುಭವಗಳಿಂದ ಡಿ. ಸಾಮಾಜಿಕ ವಿಜ್ಞಾನಿಗಳ ಪ್ರಸಾರದಿಂದ
4. ವ್ಯವಹಾರ ಪರಿಸರದ ಅರ್ಥ ತಿಳಿಸಿ.
5. ಈ ಕೆಳಗಿನ ಯಾವುದು ಏಕ ಬಳಕೆಯ ಯೋಜನೆಗೆ ಉದಾಹರಣೆಯಾಗಿದೆ?
   ಎ. ನೀತಿ ಬಿ. ಕಾರ್ಯ ವಿಧಾನ ಸಿ. ಮುಂಗಡ ಪತ್ರ ಡಿ. ವಿಧಾನ
6. ಸಂಘಟನೆಯ ರಚನೆ ಎಂದರೇನು?
7. ಉತ್ತರದಾಯಿತ್ವವನ್ನು ಪ್ರತಿನಿಯೋಜಿಸಬಹುದೇ?
8. ಇವುಗಳಲ್ಲಿ ಯಾವುದು ಸಿಬ್ಬಂದಿ ನಿರ್ವಹಣೆಯ ಕಾರ್ಯವಲ್ಲ?
   ಎ. ನೇಮಕಾತಿ ಬಿ. ತರಬೇತಿ ಸಿ. ಪರಿಹಾರ ಡಿ. ನಿರ್ದೇಶಿಸುವಿಕೆ
9. ನಾಯಕತ್ವದ ಯಾವುದಾದರೂ ಒಂದು ಶೈಲಿಯನ್ನು ತಿಳಿಸಿ.
10. ದ್ರಾಕ್ಷಿಬಳ್ಳಿ ಸಂವಹನದ ಯಾವುದಾದರೂ ಒಂದು ವಿಧವನ್ನು ಹೆಸರಿಸಿ.
11. PERT ಅನ್ನು ವಿಸ್ತರಿಸಿ ಬರೆಯಿರಿ.
12. ಹೊಸ ಯಂತ್ರವನ್ನು ಖರೀದಿಸುವ ಅಥವಾ ಹೊಸ ಶಾಖೆಯೊಂದನ್ನು ತೆರೆಯುವ ನಿರ್ಣಯವು __________ಕ್ಕೆ ಉದಾಹರಣೆಯಾಗಿದೆ.
    ಎ. ಹಣಕಾಸು ಒದಗಿಸುವ ನಿರ್ಣಯ ಬಿ. ಕಾರ್ಯಶೀಲ ಬಂಡವಾಳದ ನಿರ್ಣಯ
    ಸಿ. ಹೂಡಿಕೆಯ ನಿರ್ಣಯ ಡಿ. ಮೇಲಿನವು ಯಾವುದೂ ಅಲ್ಲ

## ವಿಭಾಗ – ಬಿ

**II.** ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೆ ಎರಡು ಅಂಕಗಳು: **10X2=20**

**13.** ನಿರ್ವಹಣೆಯನ್ನು ವ್ಯಾಖ್ಯಾನಿಸಿ.

**14.** ಏಕರೂಪ ಆಜ್ಞೆ ಮತ್ತು ಏಕರೂಪ ನಿರ್ದೇಶನಗಳ ನಡುವೆ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

**15.** ಗ್ಯಾಂಗ್ ಪ್ಲ್ಯಾಂಕ್ ಎಂದರೇನು?

**16.** ಜಾಗತೀಕರಣದ ಅರ್ಥ ನೀಡಿ.

**17.** ಕಾರ್ಯಕ್ರಮದ ಅರ್ಥವನ್ನು ನೀಡಿ.

**18.** ಔಪಚಾರಿಕ ಸಂಘಟನೆ ಎಂದರೇನು?

**19.** ಸಿಬ್ಬಂದಿ ನಿರ್ವಹಣೆಯಲ್ಲಿ ಅನುಸ್ಥಾಪನೆ ಎಂದರೇನು?

**20.** ಆಯ್ಕೆಯ ಅರ್ಥ ತಿಳಿಸಿ.

**21.** ನಾಯಕತ್ವದ ಯಾವುದಾದರೂ ಎರಡು ಲಕ್ಷಣಗಳನ್ನು ಬರೆಯಿರಿ.

**22.** ಸಂವಹನದ ಯಾವುದಾದರೂ ಎರಡು ಮಾನಸಿಕ ಅಡಚಣೆಗಳನ್ನು ತಿಳಿಸಿ.

**23.** ಹೊಣೆಗಾರಿಕೆ ಲೆಕ್ಕಪತ್ರ ನಿರ್ವಹಿಸುವಿಕೆ ಎಂದರೇನು?

**24.** ಹಣಕಾಸಿನ ಯೋಜಿಸುವಿಕೆಯ ಅವಳಿ ಉದ್ದೇಶಗಳನ್ನು ತಿಳಿಸಿ.

## ವಿಭಾಗ – ಸಿ

**III.** ಕೆಳಗಿನ ಯಾವುದಾದರೂ ಏಳು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 10–12 ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 4 ಅಂಕಗಳು: **7X4=28**

**25.** ನಿರ್ವಹಣೆಯ ಪ್ರಾಮುಖ್ಯತೆಯನ್ನು ನಾಲ್ಕು ಅಂಶಗಳೊಂದಿಗೆ ತಿಳಿಸಿ.

**26.** ನಿರ್ವಹಣೆಯು ವಿಜ್ಞಾನವೇ? ಸಮರ್ಥಿಸಿ.

**27.** ವೈಜ್ಞಾನಿಕ ನಿರ್ವಹಣೆಯ ತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**28.** ವ್ಯವಹಾರ ಪರಿಸರದ ಯಾವುದಾದರೂ ನಾಲ್ಕು ಲಕ್ಷಣಗಳನ್ನು (ಸಂಕ್ಷಿಪ್ತವಾಗಿ) ವಿವರಿಸಿ.

**29.** ಯೋಜಿಸುವಿಕೆಯ ಯಾವುದಾದರೂ ನಾಲ್ಕು ಮಿತಿಗಳನ್ನು ವಿವರಿಸಿ.

**30.** ಅನೌಪಚಾರಿಕ ಸಂಘಟನೆಯ ಯಾವುದಾದರೂ ಎರಡು ಅನುಕೂಲತೆಗಳು ಮತ್ತು ಎರಡು ಅನನುಕೂಲತೆಗಳನ್ನು ತಿಳಿಸಿ.

**31.** ನೇಮಕಾತಿಯ ಯಾವುದಾದರೂ ನಾಲ್ಕು ಬಾಹ್ಯ ಮೂಲಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**32.** ನಿರ್ದೇಶಿಸುವಿಕೆಯ ಪ್ರಾಮುಖ್ಯತೆಯನ್ನು ವಿಷದಪಡಿಸುವ ಯಾವುದಾದರೂ ನಾಲ್ಕು ಅಂಶಗಳನ್ನು ವಿವರಿಸಿ.

**33.** ನಿಯಂತ್ರಿಸುವಿಕೆಯ ಪ್ರಕ್ರಿಯೆಯಲ್ಲಿ ಒಳಗೊಳ್ಳುವ ಹಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**34.** ಹಣಕಾಸಿನ ಯೋಜಿಸುವಿಕೆಯ ಪ್ರಾಮುಖ್ಯತೆಯನ್ನು ಯಾವುದಾದರೂ ನಾಲ್ಕು ಅಂಶಗಳೊಂದಿಗೆ ವಿವರಿಸಿ.

## ವಿಭಾಗ–ಡಿ

**IV.** ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **20–25** ವಾಕ್ಯದಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎಂಟು ಅಂಕಗಳು: **4X8=32**

**35.** "ನಿರ್ವಹಣೆಯು ನಿರಂತರವಾಗಿ ಆಂತರಿಕ ಸಂಬಂಧ ಹೊಂದಿರುವ ಕಾರ್ಯಗಳ ಸರಣಿಯಾಗಿದೆ" ಚರ್ಚಿಸಿ.

**36.** ಯೋಜಿಸುವಿಕೆ ಎಂದರೇನು? ಯೋಜಿಸುವಿಕೆಯ ವಿವಿಧ ಲಕ್ಷಣಗಳನ್ನು ವಿವರಿಸಿ.

**37.** ಸಂಘಟಿಸುವಿಕೆಯ ಪ್ರಾಮುಖ್ಯತೆಗಳನ್ನು ವಿವರಿಸಿ.

**38.** ಕಾರ್ಯನಿರತ ತರಬೇತಿಯ ನಾಲ್ಕು ವಿಧಾನಗಳು ಮತ್ತು ಕಾರ್ಯೇತರ ತರಬೇತಿಯ ಯಾವುದಾದರೂ ನಾಲ್ಕು ವಿಧಾನಗಳನ್ನು ವಿವರಿಸಿ.

**39.** ಒಬ್ಬ ಯಶಸ್ವಿ ನಾಯಕನ ಗುಣಗಳನ್ನು ವಿವರಿಸಿ.

**40.** ಸಂಘಟನೆಯೊಂದರ ಕಾರ್ಯಶೀಲ ಬಂಡವಾಳದ ಅಗತ್ಯತೆಯ ಮೇಲೆ ಪ್ರಭಾವ ಬೀರುವ ಯಾವುದಾದರೂ ಎಂಟು ಅಂಶಗಳನ್ನು ವಿವರಿಸಿ.

## ವಿಭಾಗ – ಇ

### (ಪ್ರಾಯೋಗಿಕ ಪ್ರಶ್ನೆಗಳು)

**V.** ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳನ್ನು ಉತ್ತರಿಸಿ. **2X5=10**

**41.** ವ್ಯವಹಾರ ಸಂಸ್ಥೆಯ ಯಶಸ್ಸಿನ ಮೇಲೆ ಪ್ರಭಾವ ಬೀರುವ ವ್ಯವಹಾರ ಪರಿಸರದ ಮೂಲಾಂಶ (ಆಯಾಮ)ಗಳನ್ನು ಅಂದವಾದ ರೇಖಾಚಿತ್ರದ ಮೂಲಕ ತೋರಿಸಿ.

**42.** ಒಂದು ವ್ಯವಹಾರ ಸಂಸ್ಥೆಯ ವ್ಯವಸ್ಥಾಪಕರಾಗಿ, ಕಾರ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಮೊದಲು ಯೋಜಿಸುವಿಕೆ ಪ್ರಕ್ರಿಯೆಯಲ್ಲಿ ನೀವು ಯಾವ ಹಂತಗಳನ್ನು ಅನುಸರಿಸುತ್ತೀರಿ?

**43.** ಮಾಸ್ಲೋರವರ "ಪ್ರೇರೇಪಣೆಯ ಅಗತ್ಯತಾ ವರ್ಗಶ್ರೇಣಿ ಸಿದ್ಧಾಂತ" ವನ್ನು ಬಿಂಬಿಸುವ ಅಂದವಾದ ಚಿತ್ರವನ್ನು ಬಿಡಿಸಿ.

******************************